'ವಿಶ್ವದ ಅತ್ಯದ್ಭುತ ಸೃಷ್ಟಿ ಹುಲಿ' ಎನ್ನುವುದು ಅಮೆರಿಕ ಮೃಗಾಲಯವೊಂದರ ಅಧಿಕಾರಿ ಜಾಕ್ ಹನ್ನ ಅವರ ಮಾತು. 'ಮನುಷ್ಯ ಹುಲಿಯನ್ನು ಕೊಲ್ಲಲು ಬಯಸಿದರೆ ಅದು ಕ್ರೀಡೆ. ಹುಲಿ ಮನುಷ್ಯನನ್ನು ಕೊಂದರೆ ಅದು ಕ್ರೌರ್ಯ' ಎನ್ನುವುದು ಕವಿ ಜಾರ್ಜ್ ಬರ್ನಾರ್ಡ್ ಶಾ ಅವರ ಮಾತು. ಹುಲಿಗಳ ಬಗೆಗಿನ ಸಮಾಜದ ಎರಡು ಧೋರಣೆಗಳಿಗೆ ಉದಾಹರಣೆಯಂತಿರುವ ಈ ಮಾತುಗಳು, ಹುಲಿಗಳ ಈ ಹೊತ್ತಿನ ಪರಿಸ್ಥಿತಿಯನ್ನೂ ಸೂಚಿಸುವಂತಿವೆ.

ಹುಲಿ ಒಂದು ಅದ್ಭುತ ಪ್ರಾಣಿ ಎನ್ನುವ ಬಗ್ಗೆ ಯಾರಿಗೂ ಅನುಮಾನವಿಲ್ಲ. ಈ ಅದ್ಭುತದ ಅರಿವಿದ್ದೂ ಅದನ್ನು ಉಳಿಸಿಕೊಳ್ಳಲು ನಾವೇನು ಮಾಡಿದ್ದೇವೆ ಎನ್ನುವ ಪ್ರಶ್ನೆಗೆ ಉತ್ತರವೂ ದೊರಕುವುದಿಲ್ಲ. ಚರಿತ್ರೆಯ ಪುಟಗಳಲ್ಲಿ ದಾಖಲಾಗಿರುವುದೆಲ್ಲ ಹುಲಿಶಿಕಾರಿಯ ಕ್ರೌರ್ಯದ ಕಥೆಗಳೇ ಹೊರತು, ಹುಲಿಪ್ರೀತಿಯ ಕಥನಗಳಲ್ಲ. ಹುಲಿಯ ಕ್ರೌರ್ಯದ ಬಗ್ಗೆ ಮಾತನಾಡುವ ನಾವು ಆ ಪ್ರಾಣಿಗೆ ಕೊಟ್ಟಿರುವುದು ಕ್ರೌರ್ಯವನ್ನೇ! ಸಮಕಾಲೀನ ಸಂದರ್ಭ ಕೂಡ ಭಿನ್ನವಾಗಿಯೇನೂ ಇಲ್ಲ. ಹುಲಿಸಂತತಿ ರಕ್ಷಣೆಗಾಗಿ ಹಮ್ಮಿಕೊಂಡ ಅನೇಕ ಕಾರ್ಯಕ್ರಮಗಳು, ಅಧಿಕಾರಿಗಳ ಹಿತಾಸಕ್ತಿ ರಕ್ಷಣೆಯ ರೂಪ ಪಡೆದುಕೊಂಡಿವೆ. ಇಂಥ ಸಂದರ್ಭದಲ್ಲಿ, 'ಹುಲಿಸವಾರಿ' ಎನ್ನುವುದು ರೂಪಕವಾಗಿಯಷ್ಟೇ ಉಳಿಯದೆ, ಮನುಷ್ಯನೆಂಬ ನಾಡಪ್ರಾಣಿ ಕಾಡುಪ್ರಾಣಿಯ ಚಹರೆಯನ್ನು ಅಳಿಸುವ ಪ್ರಯತ್ನವೇ ಆಗಿದೆ.

ಇಷ್ಟಕ್ಕೂ ನಮಗೆ ಹುಲಿ ಏಕೆ ಮುಖ್ಯ? ಹುಲಿ ಇಲ್ಲದೆ ಹೋದರೆ ಏನಾಗುತ್ತದೆ? ಇಂಥ ಪ್ರಶ್ನೆಗಳಿಗೆ ನೀಡಬಹುದಾದ ಸರಳ ಉತ್ತರ: ಹುಲಿರಕ್ಷಣೆ ಕುರಿತಾದ ಎಲ್ಲ ಮಾತುಗಳು ನಮ್ಮ ರಕ್ಷಣೆಗೆ ಸಂಬಂಧಿಸಿದ ಸಂಗತಿಗಳೂ ಆಗಿರುವುದು. ಹುಲಿ, ಕಾಡು, ಕಾಡಿನ ಜೀವಿಗಳು – ಈ ಪರಿಸರಚಕ್ರದ ಅತ್ಯಂತ ಪ್ರಬಲವಾದ ಕೊಂಡಿ ಹುಲಿಯಾಗಿರುವುದರಿಂದ, ಅದನ್ನು ಹೊರತುಪಡಿಸಿ ಪರಿಸರ ಸಂರಕ್ಷಣೆ ಎನ್ನುವುದಕ್ಕೆ ಅರ್ಥವೇ ಇರುವುದಿಲ್ಲ. ವಿಪರ್ಯಾಸ ನೋಡಿ, ಹುಲಿಯ ಕಾಳಜಿ ಬಗ್ಗೆ ಒಂದೆಡೆ ಮಾತುಗಳು ಕೇಳಿಬರುತ್ತಿದ್ದರೆ, ಇನ್ನೊಂದೆಡೆ ರಕ್ಷಿತಾರಣ್ಯದ ಹೆಸರಿನಲ್ಲಿ ಅಲ್ಲಿನ ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸುವ ಘಟನೆಗಳು ನಡೆದಿವೆ.

ಹುಲಿಯ ರಕ್ಷಣೆ ಹೆಸರಿನಲ್ಲಿ ನಡೆಯುವ ಕಸರತ್ತುಗಳು ಹಾಗೂ ಕಾಡಿನ ಮೂಲನಿವಾಸಿಗಳ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ರಾಜಸ್ಥಾನದ ಸಾರಿಸ್ಕ ಅಭಯಾರಣ್ಯಕ್ಕೆ ಹೋಗಬೇಕು. ಅಲ್ಲಿ ಹುಲಿ ಸಂರಕ್ಷಣೆಯೂ ನಡೆಯುತ್ತಿದೆ, ಕಾಡಂಚಿನ ನಿವಾಸಿಗಳ ತಲ್ಲಣವೂ ಅಸ್ತಿತ್ವದಲ್ಲಿದೆ. ಸಾರಿಸ್ಕದಲ್ಲಿನ ಹುಲಿ–ಮಾನವ ಸಂಘರ್ಷದ ಬಗ್ಗೆ ಯೋಚಿಸುತ್ತಿರುವಾಗ, ಆ ಪರಿಸರದ ನಿವಾಸಿ ಹಾಗೂ ಸಾಮಾಜಿಕ ಕಾರ್ಯಕರ್ತ ಕನ್ನಯ್ಯ ಮೂಲಭೂತ ಪ್ರಶ್ನೆಯೊಂದನ್ನು ಎದುರಿಗಿಟ್ಟರು. 'ನಾವು ಸಾರಿಸ್ಕ ಕಾಡಿನೊಳಗೆ ಬಹುಕಾಲದಿಂದ ಜೀವನ ನಡೆಸುತ್ತಿದ್ದೆವು. ಈ ಊರುಗಳನ್ನೆಲ್ಲ ಹುಲಿ ರಕ್ಷಿತಾರಣ್ಯ ಎಂದು ಘೋಷಣೆ ಮಾಡುವುದಕ್ಕೆ ಮುನ್ನವೇ ಇಲ್ಲಿ ನಾಲ್ಕೈದು ಸಮುದಾಯದವರು ಸೇರಿ ಜೀವನ ಸಾಗಿಸುತ್ತಿದ್ದೆವು. ಆಗ ಇಲ್ಲಿ ಹುಲಿಗಳಿರಲಿಲ್ಲವೇ?' ಎನ್ನುವ ಪ್ರಶ್ನೆ ಹಾಕಿದ ಅವರು, 'ಆಗಲೂ ಇಲ್ಲಿ ಹುಲಿಗಳಿದ್ದವು' ಎನ್ನುತ್ತಾ ಹುಲಿಗಳ ಕತೆಯನ್ನು ವಿವರಿಸತೊಡಗಿದರು.

'ಇಲ್ಲಿಗೆ ಬರುವವರೆಲ್ಲರೂ ಹುಲಿಗಳ ಕತೆಯನ್ನು ಕೇಳುತ್ತಾರೆ. ಆದರೆ ನಾವು ಹುಲಿಗಳನ್ನು ಪೂಜಿಸುತ್ತಾ ಆ ಕಾಲದಲ್ಲಿ ಚೆನ್ನಾಗಿ ಬದುಕಿದ್ದೆವು ಎಂದು ಹೇಳಹೊರಟರೆ ನಮ್ಮ ಮಾತನ್ನು ಯಾರೂ ಕೇಳುವುದಿಲ್ಲ. ಹುಲಿಗಳನ್ನು ರಕ್ಷಿಸಬೇಕು, ಹಾಗಾಗಿ ನೀವೆಲ್ಲ ಕಾಡಿನಿಂದ ಹೊರಗೆ ಹೋಗಿ ಎಂದು ಹೇಳಿದರೆ, ನಾವೆಲ್ಲಿಗೆ ಹೋಗುವುದು?' ತಮ್ಮ ಪ್ರತಿ ಮಾತನ್ನೂ ಕನ್ನಯ್ಯಾ ಪ್ರಶ್ನೆಗಳ ಮೂಲಕವೇ ಕೊನೆಗೊಳಿಸುತ್ತಾರೆ. 'ಯಾರನ್ನು ರಕ್ಷಿಸಬೇಕು? ಹುಲಿಗಳನ್ನೋ ಅಥವಾ ಮನುಷ್ಯರನ್ನೋ' ಎಂಬಲ್ಲಿಗೆ ಬಂದು ನಿಲ್ಲುತ್ತದೆ ಅವರ ಮಾತು. ಅವರ ಪ್ರಶ್ನೆಗಳ ಹಿನ್ನೆಲೆಯಲ್ಲಿ ಅವನಿಯ ಕಥೆಯನ್ನು ನೆನಪಿಸಿಕೊಳ್ಳಬೇಕು.

ಮಹಾರಾಷ್ಟ್ರದ ನಾಗ್‌ಪುರ ಬಳಿಯ ಯವತ್ಮಾಳ್ ಪ್ರದೇಶದಲ್ಲಿ 'ಅವನಿ' ಎಂಬ ಹೆಣ್ಣುಹುಲಿ ಮನುಷ್ಯರನ್ನು ತಿನ್ನುತ್ತಿದೆ ಎಂಬ ಆರೋಪ ಎದುರಿಸಿ ಹಲವು ವರ್ಷ ಬದುಕಿತ್ತು. ಮನುಷ್ಯರಕ್ತದ ರುಚಿ ನೋಡಿದ ಹುಲಿಯನ್ನು ಕೊಲ್ಲಬೇಕು ಎಂಬ ಆಗ್ರಹಕ್ಕೆ 9 ಸಾವಿರಕ್ಕೂ ಹೆಚ್ಚು ಸ್ಥಳೀಯರು ಸಹಿ ಹಾಕಿದ್ದರು. ಆದರೆ ಪ್ರಾಣಿದಯಾ ಸಂಘಟನೆಗಳು ಹುಲಿಯನ್ನು ಕೊಲ್ಲದೇ, ಜೀವಂತ ಸೆರೆ ಹಿಡಿದು ಸ್ಥಳಾಂತರಿಸುವುದು ಒಳ್ಳೆಯದು ಎಂಬ ಆಗ್ರಹಿಸಿತ್ತು. ಸುಪ್ರೀಂ ಕೋರ್ಟಿನಲ್ಲಿ ಈ ಬಗ್ಗೆ ಸಾಕಷ್ಟು ಜಟಾಪಟಿ ನಡೆದ ಬಳಿಕ ಹುಲಿಯನ್ನು ಕೊಲ್ಲುವುದೇ ಒಳ್ಳೆಯದು ಎಂಬ ತೀರ್ಪು ಹೊರಬಿತ್ತು. ಅವನಿಯನ್ನು ಕೊಂದ ಬಳಿಕ ಈ ಕುರಿತು ದೀರ್ಘಕಾಲ ಜಿಜ್ಞಾಸೆ ನಡೆದಿತ್ತು. 'ಹುಲಿಯು ಮನುಷ್ಯರನ್ನು ತಿನ್ನುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ್ದಾದರೂ ಯಾರು? ಎಂಬ ಪ್ರಶ್ನೆಗೆ ಉತ್ತರ ಕೊಡುವ ವ್ಯವಧಾನವನ್ನು ಪ್ರಸ್ತುತ ಸಮಾಜದಲ್ಲಿ ಯಾರೂ ಉಳಿಸಿಕೊಂಡಿಲ್ಲ. ಅಷ್ಟೇ ಅಲ್ಲ, ಇನ್ನೊಂದು ಹುಲಿಯು ಮನುಷ್ಯ ರಕ್ತದ ರುಚಿಯನ್ನು ನೋಡುವಂತಹ ಪರಿಸ್ಥಿತಿ ಸೃಷ್ಟಿಯಾಗಬಾರದು ಎಂಬ ನಿಟ್ಟಿನಲ್ಲಿಯೂ ಹೆಚ್ಚೇನೂ ಪ್ರಯತ್ನಗಳು ನಡೆಯುತ್ತಿಲ್ಲ' ಎನ್ನುವುದು ಪ್ರಾಣಿದಯಾ ಸಂಘದ ಸದಸ್ಯರ ಬೇಸರ.

ಅವನಿಯನ್ನು ಕೊಲ್ಲುವ ಯೋಜನಾ ತಂಡದಲ್ಲಿ ಒಬ್ಬರಾಗಿದ್ದ, ಪ್ರಸ್ತುತ ನಿವೃತ್ತರಾಗಿರುವ ಅರಣ್ಯ ಹೆಚ್ಚುವರಿ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಓ.ಪಿ. ಕಲೇರ್ – 'ಹುಲಿಗಳು ಸಾಮಾನ್ಯವಾಗಿ ಮನುಷ್ಯರಿಗೆ ಯಾವ ತೊಂದರೆಯನ್ನೂ ಮಾಡುವುದಿಲ್ಲ. ನಾವು ಕುಳಿತಿದ್ದರೆ, ಅವು ಸುಮ್ಮನೇ ಹಾದು ಹೋಗುತ್ತವಷ್ಟೆ. ಆದರೆ




ಸುನೀತಾ ನಾರಾಯಣ್